QUESTION FOR ANSWER ON THE DAY

(but not taken up)

Educational Facilities

*Q.—56. Sri VATAL NAGARAJ (Chickpet).—

Will the Minister for Education be pleased to state :—

(*a*) whether it is not a fact that free Primary Educational facilities are provided ;

(*b*) whether they would also provide free Education facilities up to University level ?

A.—Sri K. V. SHANKARA GOWDA (Minister for Education).—

(*a*) Primary Education is free.

(*b*) Free Secondary Education has been provided from the year 1966-67.

SHORT NOTICE QUESTION AND ANSWER

Second Stage of Nagarjunasagar Project

Q.—44. Sri S. M. GURADDi (Muddebihal).—

Will the Minister for Public Works be pleased to state :—

(*a*) whether it has come to the notice of the Government that the Andhra Pradesh Government are taking necessary steps to go ahead with the construction of the II Stage of the Nagarjunasagar Project ;

(*b*) if so, the steps taken by the State Government to prevent the Andhra Pradesh from doing so ?

A.—Sri VEERENDRA PATIL (Minister for Public Works).—

(*a*) Such reports have been noticed in the newspapers.

(*b*) Government of India have been addressed to confirm that the Second Stage of Nagarjunasagar will not be cleared before the question of diversion of surplus waters of Godavari to Krishna Basin is finalised.

ಶ್ರೀ ಎಸ್. ಎಂ. ಗುರೆಡ್ಡಿ.—ನಾಗಾರ್ಜುನಸಾಗರ ಎರಡನೇ ಹಂತದ ಕೆಲಸವನ್ನು ಮುಗಿಸಲಕ್ಕೆ ಈಗಾಗಲೇ ಆಂಧ್ರ ಸರ್ಕಾರದವರು ಕಲ್ಕತ್ತದಲ್ಲಿ ಒಬ್ಬ ಕಂಟ್ರಾಕ್ಟರಿಗೆ ಗೇಟ್ ಮುಚ್ಚುವ ಸಲುವಾಗಿ ಕಂಟ್ರಾಕ್ಟ್ ಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರಕ್ಕೆ ಆ ರೀತಿ ತಿಳಿದು ಬಂದಿದೆ. ಆದರೆ ಅಧಿಕೃತವಾಗಿ ತಿಳಿದು ಬಂದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ಆಂಧ್ರ ಸರ್ಕಾರದವರು ಒಂದು ವೇಳೆ ಈ ಬಾಗಿಲನ್ನು ಹಾಕಿದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈ ವಿಷಯ ನಮಗೆ ಗೊತ್ತಾದ ತಕ್ಷಣ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ. ಕೇಂದ್ರ ಸರ್ಕಾರ ನಾಗಾರ್ಜುನಸಾಗರ ಎರಡನೇ ಹಂತಕ್ಕೆ ಕ್ಲಿಯರೆನ್ಸ್ ಕೊಡಬಾರದು ಎಂದು ಪ್ರತಿಭಟನೆ ಮಾಡಿ ಬರೆದಿದ್ದೇವೆ. ಮೊನ್ನೆ ದಿಲ್ಲಿಗೆ ಹೋದಾಗ ನಾನೂ ಮತ್ತು ಮುಖ್ಯ ಮಂತ್ರಿಗಳೂ ಸಂಬಂಧಪಟ್ಟ ಮಂತ್ರಿಗಳ ಜೊತೆ ಚರ್ಚೆ ಮಾಡಿದ್ದೇವೆ. ನಮ್ಮನ್ನು ಕನ್‌ನಲ್ಟ್ ಮಾಡದೆ ನಾಗಾರ್ಜುನಸಾಗರ ಎರಡನೇ ಹಂತಕ್ಕೆ ಕ್ಲಿಯರೆನ್ಸ್ ಕೊಡಲಾರದಂಥ ಭರವಸೆಯನ್ನು ಅವರು ಕೊಟ್ಟಿದ್ದಾರೆ.

2-00 P.M.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಗಾರ್ಜುನಸಾಗರದಲ್ಲಿ ಏನೇನು ಕೆಲಸ ನಡೆದು ಯಾವ ಯಾವ ಮಟ್ಟಕ್ಕೆ ಬಂದಿದೆ ಎನ್ನತಕ್ಕ ವಿಷಯ ತಿಳಿದುಕೊಳ್ಳುವುದಕ್ಕೆ ಸರ್ಕಾರ ಏನೇನು ವ್ಯವಸ್ಥೆ ಮಾಡಿದೆ ?

ಶ್ರೀ ವೀರೇಂದ್ರ ಪಾಟೀಲ್.— ಅಲ್ಲಿ ಯಾವ ಯಾವ ಕೆಲಸ ಯಾವ ಯಾವ ಹಂತದಲ್ಲಿ ನಡೆಯುತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಯಾವ ಸಾಧನಗಳಿವೆಯೋ ಆ ಸಾಧನಗಳ ಮುಖಾಂತರ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಂಧ್ರ ಸರ್ಕಾರದವರು ನಾಗಾರ್ಜುನಸಾಗರದಲ್ಲಿ ಇದುವರೆಗೆ ಏನು ಕೆಲಸ ನಡೆಸಿದ್ದಾರೆ ಎನ್ನುವುದನ್ನು ಅಧಿಕೃತವಾಗಿ ನಿಮ್ಮ ಅಧಿಕಾರಿಗಳು ತಿಳಿದುಕೊಳ್ಳುವುದಕ್ಕೆ ಏನಾದರೂ ವ್ಯವಸ್ಥೆ ಸರ್ಕಾರ ಮಾಡಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಧಿಕೃತವಾಗಿ ನಮ್ಮ ಅಧಿಕಾರಿಗಳನ್ನು ಕಳಿಸಿ ತಿಳಿದುಕೊಳ್ಳಬೇಕಾಗಿದ್ದರೆ, ಯಾವುದೇ ಅಧಿಕಾರಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯದಲ್ಲಿ ಇರುವಂಥ ಪ್ರಾಜೆಕ್ಟ್‌ಗಳ ಕೆಲಸ ಎಷ್ಟರಮಟ್ಟಿಗೆ ನಡೆಯುತ್ತಿದೆ ಎನ್ನುವುದನ್ನು ತಿಳಿಯಬೇಕಾಗಿದ್ದರೆ ಆ ರಾಜ್ಯದವರಿಗೆ ಬರೆದು ಅವರ ಪರವಾನಗಿಯನ್ನು ತೆಗೆದುಕೊಂಡು, ಅನಂತರ ಅಧಿಕಾರಿಯನ್ನು ಕಳಿಸಬೇಕಾಗುತ್ತದೆ. ಆ ರೀತಿ ಬರೆದು ಪರವಾನಗಿ ತೆಗೆದುಕೊಳ್ಳಲು ಸಿಕ್ಕುವುದು ಕಷ್ಟವೆಂದು ಕಾಣುತ್ತದೆ. ಯಾವ ವಿಧಾನದಿಂದ ಏನು ಕೆಲಸಗಳು ಅಲ್ಲಿ ನಡೆಯುತ್ತಿವೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಆ ವಿಧಾನಗಳನ್ನನುಸರಿಸಿ ನಾವು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿನ ಕೆಲಸ ಯಾವ ಘಟ್ಟಕ್ಕೆ ಬಂದಿದೆ ಎಂದು ಬೋರ್ಡ್ ಹಾಕಿದ್ದಾರೆ. ಅದನ್ನು ನೋಡಿಕೊಂಡು ಬಂದು ನಿಮಗೆ ತಿಳಿಸುವುದಕ್ಕೆ ಕೂಡ ನೀವು ಏನೂ ವ್ಯವಸ್ಥೆ ಮಾಡಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಯಾವ ರೀತಿಯಿಂದ ತಿಳಿದುಕೊಳ್ಳುವುದಕ್ಕೆ ಸಾಧ್ಯವೊ ಆ ರೀತಿಯಿಂದ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ನಾನು ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಏನು ಮಾಡಿದ್ದೀರಿ, ಯಾರನ್ನು ಕಳಿಸಿದ್ದಿರಿ, ಯಾರು ಬಂದು ತಿಳಿಸಿದರು ಎನ್ನುವುದನ್ನು ಈ ಸಭೆಗೆ ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅಧಿಕೃತವಾಗಿ ಯಾರಿಗೇ ಆಗಲೀ ಯಾವ ರೀತಿ ತಿಳಿದುಕೊಂಡಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. ನಾಗಾರ್ಜುನಸಾಗರದ ಪ್ರೋಗ್ರೆಸ್ ಏನಿದೆ ಎನ್ನುವಂಥದ್ದನ್ನು ತಿಳಿದುಕೊಂಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಪ್ರೋಗ್ರೆಸ್ ಯಾವ ಮಟ್ಟದಲ್ಲಿದೆ ಎಂದು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಮಗೆ ಗೊತ್ತಿರುವ ಹಾಗೆ ಮೊದಲನೆ ಹಂತ ಇನ್ನೂ ಮುಗಿದಿಲ್ಲ, ಮುಗಿಯುವ ಹಂತದಲ್ಲಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾಗಾರ್ಜುನಸಾಗರದ ಮೊದಲನೆ ಹಂತ ಮುಗಿದಿಡೆ ಎಂದು ಸರ್ಕಾರ ಯಾವತ್ತೂ ಈ ಸಭೆಗೆ ಉತ್ತರ ಕೊಟ್ಟಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮುಗಿದಿದೆ ಎಂದು ನಾನು ಎಂದೂ ಹೇಳಿಲ್ಲ. ಮೊದಲನೆಯ ಹಂತದ ಕೆಲಸ ನಡೆಯುತ್ತಿದೆ, ಕೆಲಸ ಇನ್ನೂ ಮುಗಿದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—20-3-63ರಲ್ಲಿ ಅಂದರೆ ನಾಲ್ಕು ವರ್ಷಗಳ ಹಿಂದೆ ಮಾನ್ಯ ಮಂತ್ರಿಗಳು ಸಭೆಗೆ ಈ ರೀತಿ ಹೇಳಿದ್ದಾರೆ. ''ತುರ್ತಾಗಿ ನಾಗಾರ್ಜುನಸಾಗರ ನಡೆಯುತ್ತಿದೆ, ಫಸ್ಟ್ ಸ್ಟೇಜ್ ಪ್ರಾರಂಭವಾಗಿ ಕಂಪ್ಲೀಟ್ ಮಾಡಿದ್ದಾರೆ. ಸೆಕಂಡ್ ಸ್ಟೇಜ್ ಮುಂದೆ ಹೋಗುತ್ತಿದ್ದಾರೆ'' ಎಂದು ಹೇಳಿದ್ದಾರೆ. ಈಗ ಫಸ್ಟ್ ಸ್ಟೇಜ್ ಮುಗಿದಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸುಳ್ಳು, ಯಾವುದು ನಿಜ ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ನನಗೆ ಗೊತ್ತಿರುವ ಹಾಗೆ ನಾಗಾರ್ಜುನಸಾಗರ ಮೊದಲನೆ ಹಂತ ಮುಗಿದು ಎರಡನೆ ಹಂತಕ್ಕೆ ಹೋಗಿದೆ ಎಂದು ಹೇಳುವುದು ಅಷ್ಟು ಸರಿಯಲ್ಲ. ನಾಗಾರ್ಜುನ ಸಾಗರ ಮೊದಲನೆ ಹಂತ ಮುಗಿಯಬೇಕಾಗಿದೆ. ಇನ್ನೂ 30–40 ಕೋಟಿ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಮೊದಲನೆ ಹಂತ ಇನ್ನೂ ಮುಗಿದಿಲ್ಲ ಎನ್ನುವಂಥ ವಿಷಯ ನನಗೆ ಗೊತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳ ಹೇಳಿಕೆಯ ಪ್ರಕಾರ ನಾಲ್ಕು ವರ್ಷಗಳ ಹಿಂದೆಯೇ ಕೆಲಸ ಮುಗಿದಿವೆ, ಎರಡನೇ ಹಂತ ತೆಗೆದುಕೊಂಡಿದ್ದಾರೆಂದು ಇದೆ. ಅವರೇ ಹೇಳಿದ್ದಾರೆ.

Mr. SPEAKER.—Let it be verified.

Sri H. SIDDAVEERAPPA,—Has it come to the notice of the Hon'ble Minister that Maharashtra State has lodged a protest stating that they are already taking up the second stage of Nagarjunasagar Project and if so, why not we add our voice to their protest ?

Sri VEERENDRA PATIL.—I have already said that Mysore Government has also made a similar protest. We have sent our representation and we have impressed upon the Government of India that till the feasibility of diverting the Godavari waters to the Krishna basin is examined, under no circumstances should the second stage of Nagarjunasagar be cleared.

ಶ್ರೀ ಎಸ್. ಎಂ. ಗುರೆಡ್ಡಿ.—ಆಂಧ್ರ ಸರ್ಕಾರದವರು ಗೋದಾವರಿ ನೀರನ್ನು ಡೈವರ್ಟ್ ಮಾಡುವುದಕ್ಕೆ ಸಾಧ್ಯವಿಲ್ಲ, ಅದು ಬಹಳ ವೆಚ್ಚದಾಯಕವಾದದು ಎಂದು ತಿಳಿಸಿದ್ದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಆಂಧ್ರ ಸರ್ಕಾರದವರು ಹಾಗೆ ಹೇಳುವ ಪ್ರಶ್ನೆಯಿಲ್ಲ. ಗುಲ್ಹಾಟಿ ಕಮಿಷನ್‌ನವರು ಹೇಳಿದ್ದಾರೆ, ಕೇಂದ್ರ ಸರ್ಕಾರ ಗೋದಾವರಿ ಡೈವರ್ಷನ್ ಬಗ್ಗೆ ಫೀಸಿಬಿಲಿಟಿ ವಿಚಾರ ಪರಿಶೀಲನೆ ಮಾಡುತ್ತಿದ್ದಾರೆ ಎಂದು. ಇದಕ್ಕೆ ಬೇಕಾಗುವ ಸಿಬ್ಬಂದಿ ಕೂಡ ಹಾಕಿದ್ದಾರೆ. ಇದರ ಪರಿಶೀಲನೆ ಮುಗಿಯುವವರೆಗೆ ನಾಗಾರ್ಜುನಸಾಗರ ಎರಡನೇ ಹಂತಕ್ಕೆ ಕ್ಲಿಯರೆನ್ಸ್ ಕೊಡುವ ಹಾಗಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ.—ಗೋದಾವರಿ ನೀರನ್ನು ಕೃಷ್ಣಾ ವ್ಯಾಲಿಗೆ ತಿರುಗಿಸಿ, ಆಂಧ್ರದವರ ಪ್ರಭಾವಕ್ಕೆ ಒಳಗಾಗಿ ಎರಡನೇ ಹಂತಕ್ಕೆ ಅನುಮತಿ ಕೊಟ್ಟರೆ ನಮ್ಮ ಸರ್ಕಾರ ಟ್ರಿಬ್ಯುನಲ್ಲಿಗೆ ಅಥವಾ ಸುಪ್ರೀಂ ಕೋರ್ಟಿಗೆ ಅಪೀಲು ಹೋಗುವ ಪ್ರಯತ್ನ ಮಾಡುತ್ತದೆಯೇ, ಸ್ಪಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಈ ಒಂದು ತೀರ್ಮಾನ ಗೊತ್ತಾದ ತಕ್ಷಣವೇ ನಾವು ಕೇಂದ್ರಕ್ಕೆ ಹೇಳಿದ್ದೇವೆ. ಎರಡನೇ ಹಂತಕ್ಕೆ ಯಾವ ಸಂದರ್ಭದಲ್ಲಿಯೂ ಕೂಡ ಕ್ಲಿಯರೆನ್ಸ್ ಕೊಡಬಾರದು ಎಂದು. ಮೊನ್ನೆ ಕೇಂದ್ರದ ಮಂತ್ರಿಗಳೊಡನೆ ಚರ್ಚೆ ಮಾಡಿದಾಗ ನಮ್ಮನ್ನು ಕೇಳದೆ ಅವರಿಗೆ ಕ್ಲಿಯರೆನ್ಸ್ ಕೊಡುವುದಿಲ್ಲ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶ್ರೀ ಕೆ. ಎಲ್. ರಾವ್ ಅವರು ಗೋದಾವರಿ ನೀರಿನ ಡೈವರ್ಷನ್ ಟೆಕ್ನಿಕಲಿ ನಾಟ್ ಫೀಸಿಬಲ್ ಎಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಟೆಕ್ನಿಕಲಿ ನಾಟ್ ಫೀಸಿಬಲ್ ಎಂದು ಹೇಳುವುದಕ್ಕೆ ಇನ್ನೂ ಕಾಲ ಬಂದಿಲ್ಲವೆಂದು ನನಗನ್ನಿಸುತ್ತದೆ. ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಕ್ನಿಕಲಿ ನಾಟ್ ಫೀಸಿಬಲ್ ಎಂದು ಅವರು ಹೇಳಿದ್ದು ಉಂಟೋ ಇಲ್ಲವೋ ?

ಶ್ರೀ ವೀರೇಂದ್ರ ಪಾಟೀಲ್.—' ಟೆಕ್ನಿಕಲಿ ಫೀಸಿಬಲ್ ' ಇದೆಯೋ ಇಲ್ಲವೋ ಎನ್ನುವ ವಿಚಾರಕ್ಕೆ ಅವರು ಸಿಬ್ಬಂದಿಯನ್ನು ಹಾಕಿದ್ದಾರೆ ; ಕೆಲವು ಮೆಷಿನರಿ, ಹಣ ಕೊಟ್ಟಿದ್ದಾರೆ, ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿದೆ. ಕೇಂದ್ರಸರ್ಕಾರಕ್ಕೆ ಇನ್ನೂ ಯಾವ ರಿಪೋರ್ಟೂ ಬಂದಿಲ್ಲ

Sri H. M. CHANNABASAPPA.—I beg to submit that this is a very important question and you must allow some time.

Mr. SPEAKER.—I have no objection. If the House desires I will spend another 20 minutes over it.

Sri H. M. CHANNABASAPPA.—May I know whether Government are aware that Dr. K. L. Rao has made a statement that the problem was one of levelling and the diversion of Krishna to the South was ruled out on technical grounds by Dr. K. L. Rao ? Have you read this ?

Sri VEERENDRA PATIL.—The question of diverting Godavari water to Krishna basin is being investigated. That I know authoritatively.

Sri H. M. CHANNABASAPPA.—I am submitting this to Government through you, Sir, and I am speaking on authority that in the Memorandum published by Government it is clearly stated that diversion of Godavari waters to the South was ruled out on technical grounds by Dr. K. L. Rao. I will pass this on to you.

Mr. SPEAKER.—This is an excellent case for a debate, but not for a supplementary. I will pass it on to Government.

ಶ್ರೀ ಎಸ್. ಶಿವಪ್ಪ.—ಕೇಂದ್ರದ ನೀರಾವರಿ ಸಚಿವರು.....

Sri K. H. RANGANATH.—Sir, the Minister's reply is an insult to this House. He is taking things very lightly. The way in which the Minister is answering questions in this House is not correct.

Mr. SPEAKER.—On one question, how many supplementaries are to be allowed ?

Sri K. H. RANGANATH.—When the Memorandum is pointed out, the Minister treats it so lightly. That is not good.

Sri H. SIDDAVEERAPPA.—Shall we not attach any value to the printed materials supplied by Government ? Shall we take it like that ?

Mr. SPEAKER.—During Question Hour, I am concerned only with supplementaries. If it is a debate, that is a different matter.

Sri H. SIDDAVEERAPPA.—There is a way of saying it. He can say, ' I will examine it, I will verify and find out which is correct. ' But on the contrary, if what has been printed and supplied by them is given a clean go-by, then we will not attach any importance to anything supplied by Government.

Sri VEERENDRA PATIL.—I did not say like that, that whatever is printed is not correct.

Sri H. SIDDAVEERAPPA.—You said that you did not agree. You can say ' I will verify and find out '.

Members' Representations

†**ಶ್ರೀ ಎನ್. ಹುಚ್ಚಮಾಸ್ತಿಗೌಡ** (ಹುಲಿಯೂರುದುರ್ಗ).—ಸ್ವಾಮಿ, ನಿನ್ನೆ ಈ ಸಭೆಯಲ್ಲಿ ಮಾನ್ಯ ಗೃಹಮಂತ್ರಿಗಳು ಶಿವಪ್ಪನವರು ಮಾತನಾಡುತ್ತಿದ್ದಾಗ ಮಧ್ಯೆ "ಬೆಂಕಿ ಹಚ್ಚುತ್ತಾ ಇರುವುದು ನೀವೇ" ಎಂದು ಹೇಳಿದರು. ಈ ವಿಷಯ ರಿಕಾರ್ಡಿನಲ್ಲಿದೆಯೇ, ಇಲ್ಲವೇ ಎಂಬುದನ್ನು ನೋಡುವುದಕ್ಕೆ ನಾನು ಪ್ರಯತ್ನಪಟ್ಟೆ. ಆ ಸಂದರ್ಭದಲ್ಲಿ ಅಧ್ಯಕ್ಷರು ಇಲ್ಲಿ ನಡೆಯುವ ಯಾವ ಕಾರ್ಯಕಲಾಪವನ್ನೂ ಬರೆದುಕೊಳ್ಳಬಾರದೆಂದು ಸೂಚನೆ ಕೊಟ್ಟ ಕಾರಣ ಅದು ರಿಕಾರ್ಡಾಗಿಲ್ಲ. ಅಂತೂ ಮುಂತ್ರಿಗಳು ನಾನು ತಿಳಿಸಿದಂತೆ ಅಂದಮ್ಮುಂಟು. ಇದು ಎಮರು ಪಕ್ಷದ ಎಲ್ಲ ಸದಸ್ಯರ ಗೌರವಕ್ಕೂ ಕುಂದು ತರುವುದಾಗಿದೆ. ಆದುದರಿಂದ ಈ ವಿಷಯವನ್ನು ಪ್ರಿವಿಲೇಜಸ್ ಕಮಿಟಿಗೆ ರೆಫರ್ ಮಾಡುವುದು ಸೂಕ್ತವೆಂದು ಭಾವಿಸಿ ನಾನು ಸೂಚನೆ ಕೊಟ್ಟಿದ್ದೇನೆ. ಇವನ್ನು ಅಧ್ಯಕ್ಷರು ವಿಚಾರಮಾಡಿ ಈ ವಿಷಯವನ್ನು ಚರ್ಚೆಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Indicates that the speeches or remarks have not been revised by the member concerned.